ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ,
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಸಂಪರ್ಕ ಸೌಧ 3ನೇ ಮಹಡಿ, ಡಾ।।ರಾಜ್‌ಕುಮಾರ್ ರಸ್ತೆ, ಒರಾಯನ್ ಮಾಲ್ ಮುಂಭಾಗ ರಾಜಾಜಿನಗರ, ಬೆಂಗಳೂರು-560010

ಕೆಆರ್‌ಡಿಸಿಎಲ್/ಭೂಸ್ವಾ/ಎಸ್‌ಆರ್-02/2018-19/04 ದಿನಾಂಕ : 17.09.2018

## ಪತ್ರಿಕಾ ಪ್ರಕಟಣೆ

## (Under Para 13 of G.O. No PWD 175 EAP 2014 Date:14.11.2014

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ210 ಇಎಪಿ2014 ದಿನಾಂಕ:19.02.2018 ರಲ್ಲಿ RFCTLARR Act 2013ರ ಕಲಂ 19(1)ರ ಅಡಿ ಬೀದರ್-ಹುಮ್ನಾಬಾದ್-ಚಿಂಚೋಳಿ ಮಾರ್ಗವಾಗಿ (ಲಿಂಕ್ ಸಂಖ್ಯೆ: 4ಎ 4ಬಿ, 47-108.100 ಕಿ.ಮೀ.ವರೆಗಿನ ರಸ್ತೆಯನ್ನು ಅಗಲೀಕರಣ ಮಾಡಿ ಅಭಿವೃದ್ಧಿಪಡಿಸಲು ಒಟ್ಟು 7.01.00(ಎ-ಗುಂ-ಆ) ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಈ ಅಧಿಸೂಚನೆ ಮೇರೆಗೆ (RFCTLARR Act 2013ರ ಕಲಂ 26 ಮತ್ತು 30(2)ರ ನಿಬಂಧನೆಗಳಿಗೆ ಒಳಪಟ್ಟು ಭೂಮಾಲೀಕರಿಗೆ/ಭಾದಿತ ಖಾತೆದಾರರಿಗೆ ನಿಯಮಾನುಸಾರ ಪಾವತಿಮಾಡಬೇಕಾದ ಎಲ್ಲಾ ವಿಧದ ಪರಿಹಾರದ ಮೊಬಲಗನ್ನು ನಿಗದಿಪಡಿಸಿ ಅದನ್ನು ವಿಶೇಷ ಜಿಲ್ಲಾಧಿಕಾರಿ, ಕೆಶಿಪ್, ಬೆಂಗಳೂರು ಇವರಿಂದ ಅವರ ಸಂಖ್ಯೆ: ಅಯೋ/ಯೋಅಘ/ವಿಜಿ/ಕೆ.ಆರ್.ಡಿ.ಸಿ.ಎಲ್/ಸಿಡ್ಲ್ಯುಡಿ-ಎಸ್.ಆರ್-14/2018-19 ದಿನಾಂಕ: 11.05.2018 ಹಾಗೂ ಕರಾಹೆಅಯೋ/ಯೋಅಘ/ವಿಜಿ/ಕೆ.ಆರ್.ಡಿ.ಸಿ.ಎಲ್/ಸಿಡ್ಲ್ಯುಡಿ-ಎಸ್.ಆರ್-40/2018-19 ದಿನಾಂಕ: 18.08.2018ರಲ್ಲಿ ಕರಡು ಐತೀರ್ಪು ಎಂದು ಅನುಮೋದಿತವಾಗಿರುತ್ತದೆ.

ಅನುಮೋದಿತ ಕರಡು ಐತೀರ್ಪನ್ನು ಆಧರಿಸಿ ದಿನಾಂಕ:11.05.2018 ಹಾಗೂ ದಿನಾಂಕ: 18.08.2018 ರಲ್ಲಿ ಸಂಬಂಧಪಟ್ಟ ರೈತರಿಗೆ/ಖಾತೆದಾರರಿಗೆ RFCTLAR&R Act 2013ರ ಕಲಂ 37(2) ಮೇರೆಗೆ ವೈಯಕ್ತಿಕ ಪರಿಹಾರ ಧನ ನಿಗದಿ ಮಾಹಿತಿಯನ್ನು ಮತ್ತು ಈ ಪರಿಹಾರ ಧನವನ್ನು ಪಡೆಯಲು ಒದಗಿಸಬೇಕಾದ ವಿವಿಧ ದಾಖಲಾತಿಗಳ ವಿವರಗಳೊಂದಿಗೆ ಹಾಗೂ ಈ ಕರಡು ಐತೀರ್ಪಿನ ಪರಿಹಾರ ಮೊಬಲಗನ್ನು ಸ್ವೀಕರಿಸಲು ಒಪ್ಪಿಗೆ ನೀಡಿದರೇ ಅಂತಹ ಖಾತೆದಾರರಿಗೆ ಅವರ ಖಾತೆಯಲ್ಲಿ ಭೂಸ್ವಾಧೀನವಾಗಿರುವ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ಗುಣೀಕೃತ ಭೂಮೌಲ್ಯದ (Multiplied Land Value) ಶೇ.25ರಷ್ಟು ಹೆಚ್ಚುವರಿ ಹಣವನ್ನು ಸೇರಿಸಿ ಪಾವತಿಸಲಾಗುವುದು ಎಂದು ವೈಯಕ್ತಿಕ ನೋಟೀಸುಗಳನ್ನು ನೊಂದಾಯಿತ ಅಂಚೆ ಮತ್ತು NGO ಮುಖಾಂತರ ಜಾರಿಮಾಡಲಾಗಿತ್ತು. ಆದರೆ ಇಲ್ಲಿಯವರೆಗೆ ಕೇವಲ 08 ಸರ್ವೆ ನಂ ಗಳ ಭಾದಿತ ರೈತರು ತಮ್ಮ ಒಪ್ಪಿಗೆಯನ್ನು ಸೂಚಿಸಿ ಪರಿಹಾರ ಮೊತ್ತವನ್ನು RTGS ಮುಖಾಂತರ ಅವರ ಖಾತೆಗೆ ಪಡೆದುಕೊಂಡಿರುತ್ತಾರೆ.

ಈ ಕೆಳಗಿನ ಷೆಡ್ಯೂಲ್‌ನಲ್ಲಿ ತೋರಿಸಿರುವ 06 ಸ.ನಂ.ಗಳ ಭಾದಿತ ರೈತರು/ಖಾತೆದಾರರು ನಿಗದಿತ ದಾಖಲೆಗಳನ್ನು ಈ ಕೆಳಕಂಡ NGO ಸಿಬ್ಬಂದಿಗಳಿಗೆ ನೀಡದೇ ಇರುವುದರಿಂದ, ಇವರಿಗೆ ಪರಿಹಾರಧನ ಪಾವತಿಸಲು ತೊಂದರೆಯಾಗಿರುತ್ತದೆ.
ಈ ವಿಶ್ವ ಬ್ಯಾಂಕ್ ನೆರವಿನ ರಸ್ತೆ ಸಂಖ್ಯೆ:02 ರ ವಿಶಿಷ್ಟ ಭೂಸ್ವಾಧೀನ ಪ್ರಕ್ರಿಯೆಯನ್ನು ದಿನಾಂಕ:15.10.2018 ಕ್ಕೆ ಪೂರ್ಣಗೊಳಿಸಿ, ಕಲಂ 19ರ ಅಧಿಸೂಚನೆಯಂತೆ ಭೂಸ್ವಾಧೀನಪಡಿಸಿಕೊಂಡಿರುವ ಎಲ್ಲಾ ಜಮೀನಿನ ವಿಸ್ತೀರ್ಣವನ್ನು ರಾಜ್ಯ ಹೆದ್ದಾರಿ ಪ್ರಾಧಿಕಾರದ ವಶಕ್ಕೆ ಪಡೆಯಬೇಕಾಗಿರುತ್ತದೆ.

ಆದ್ದರಿಂದ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ತೋರಿಸಿರುವ ಎಲ್ಲಾ ಭಾದಿತ ರೈತರು/ಖಾತೆದಾರರು ಈ ಸಾರ್ವಜನಿಕ ಪ್ರಕಟಣೆಯಿಂದ 15 ದಿನಗಳೊಳಗೆ ಅಂದರೆ ದಿನಾಂಕ: 03.10.2018 ಬುಧವಾರ ಸಂಜೆ 05:00 ಗಂಟೆಯೊಳಗೆ ಸಂಬಂಧಪಟ್ಟ ಈ ಕೆಳಕಂಡ ಸ್ವಯಂ ಸೇವಾ ಸಂಸ್ಥೆಯ ಟೀಮ್ ಲೀಡರ್ ಮತ್ತು ಅವರ ಸಹಾಯಕರನ್ನು ಸಂಪರ್ಕಿಸಿ ನಿಗದಿಪಡಿಸಿದ ದಾಖಲಾತಿಗಳು ಮತ್ತು ನಾಲ್ಕು Bond Paper ಗಳನ್ನು ಸಹಿಮಾಡಿ ಕೊಡಲು ಕೋರಿದೆ.
ಯಾವ ಯಾವ ಭಾದಿತ ರೈತರು/ಖಾತೆದಾರರು ತಮ್ಮ ಸಮ್ಮತಿಯನ್ನು ದಿನಾಂಕ: 03.10.2018ರ ಒಳಗೆ ಸೂಚಿಸುವುದಿಲ್ಲವೋ, ಅಂತಹವರ ಪರಿಹಾರದ ಮೊಬಲಗನ್ನು ಸದರಿ ಕಾಯ್ದೆಯ ಕಲಂ 51ರ ಮೇರೆಗೆ ಸರ್ಕಾರದಿಂದ ಜಿಲ್ಲಾ ಮಟ್ಟದಲ್ಲಿ ಸ್ಥಾಪಿತವಾಗಿರುವ "ಪ್ರಿನ್ಸಿಪಲ್ ಡಿಸ್ಟ್ರಿಕ್ಟ್ ಸಿವಿಲ್ ಮತ್ತು ಸೆಷನ್ಸ್ ಜಡ್ಜ್ ನ್ಯಾಯಾಲಯ, ಕಲಬುರಗಿ ಜಿಲ್ಲೆ ಇವರಲ್ಲಿ ಠೇವಣಿ ಇರಿಸಲಾಗುವುದು ಎಂದು ಸ್ಪಷ್ಟೀಕರಿಸಿದೆ. ನಂತರದ ಎಲ್ಲಾ ವ್ಯವಹರಣೆ ಈ ನ್ಯಾಯಾಲಯದ ಮುಂದೆ ಮಾಡಬೇಕಾಗುತ್ತದೆ.
ಪ್ರಯುಕ್ತ ಎಲ್ಲಾ ಭಾದಿತ ರೈತರು/ಖಾತೆದಾರರು ಈ ನಿಗದಿತ ಕಾಲಾವಕಾಶವನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಪರಿಹಾರದ ಮೊಬಲಗನ್ನು ಪಡೆದುಕೊಳ್ಳುವಂತೆ ಮತ್ತೊಮ್ಮೆ ವಿನಂತಿಸಿದೆ.
ಸ್ವಯಂ ಸೇವಾ ಸಂಸ್ಥೆಯ ಟೀಮ್ ಲೀಡರ್ ಮತ್ತು ಅವರ ಸಹಾಯಕರ ವಿವರ :
ಶ್ರೀ.ಅಶೋಕ್ ಜಮದಾರ್ , ಸ್ವಯಂ ಸೇವಾ ಸಂಸ್ಥೆಯ ಟೀಮ್ ಲೀಡರ್, ಮೊ.ನಂ.+9945787446
ಶ್ರೀ. ಸುಂದರ್ ಕಟ್ಟಿ, ಭೂಸ್ವಾಧೀನ ಸಲಹೆಗಾರರು+9448589150
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ದೂರವಾಣಿ ಸಂಖ್ಯೆ : 080-49071400

| ಷೆಡ್ಯೂಲ್ | | | | | |
|---|---|---|---|---|---|
| ಕ್ರ.ಸಂ | 19(1) ರ ಅಧಿಸೂಚನೆಯಂತೆ ಭೂಮಾಲೀಕರ ಹೆಸರು | ಸರ್ವೆ ನಂ | | ಸ್ವಾಧೀನಪಡಿಸಿಕೊಂಡ ಜಮೀನಿನ ವಿಸ್ತೀರ್ಣ (ಎ.ಗು.ಆ. ಗಳಲ್ಲಿ) | ಸ್ವಾಧೀನವಾಗುವ ಜಮೀನಿನ ಪರಿಹಾರದ ಒಟ್ಟು ಮೊಬಲಗು ರೂ.ಗಳಲ್ಲಿ |
| 1 | 2 | 3 | | 4 | 5 |
| | ಗ್ರಾಮ: ಐನೋಳಿ | ತಾಲ್ಲೂಕು: ಚಿಂಚೋಳಿ | | | ಜಿಲ್ಲೆ: ಕಲಬುರ್ಗಿ |
| 1 | ಸುಭಾಸ್‌ಚಂದ್ರ ತಂದೆ ಬಾಜಪ್ಪಾ –ಧನಗೆರ | 275 | 1 | 0.08.00 | 230663 |
| 2 | ಬಸವರಾಜ ತಂದೆ ಮಲ್ಲಪ್ಪ ಹಿರೇಮನಿ | 275 | 2A | 0.21.00 | 996844 |
| | ಪದ್ಮಾವತಿ ಗಂ ನರವೀರ ದೇಗಲ್ಮಡಿ | 275 | 2B | | |
| 3 | ರಾಜಶೇಖರ ತಂದೆ ಚಂದ್ರ ಶೆಟ್ಟಿ<br>ಸೋಮಶೇಖರ ತಂದೆ ಚಂದ್ರ ಶೆಟ್ಟಿ<br>ಗುಣಶೇಖರ ತಂದೆ ಚಂದ್ರ ಶೆಟ್ಟಿ | 264 | 1 | 0.12.00 | 316712 |
| 4 | ಸಂಗೀತ ಕೋಂ ಬಸವರಾಜ | 266 | 1 | 0.08.00 | 230663 |
| 5 | ಬೀಬನಬೀ ತಂ. ಶೇಕ ಇಮಾಮ<br>ಅಮೀರುದ್ದಿನ್ ತಂ. ಸಾಜಿದ ಹುಸೇನ್<br>ಸೈಯದ್ ಅಕ್ಟರ್ ತಂ.ರಜಾ ಅಹ್ಮದ್<br>ಗೌಸುದ್ದಿನ್ ತಂ. ರಜಾ ಅಹ್ಮದ್<br>ಅಮೀರುದ್ದಿನ್ ತಂ. ಸಾಜಿದ ಹುಸೇನ್ | 267 | | 1.38.00 | 1990681 |
| 6 | ಶಿವರಾಯ ತಂ ಚನ್ನವೀರಪ್ಪ ನಿಂಬೂರೆ | 268 | | 0.15.00 | 600310 |
| | ಒಟ್ಟು | | | **3.22.00** | **43,65,873** |

(ರಾಜೇಶ್ ಕೆ)
ಮುಖ್ಯ ಅಭಿಯಂತರರು
ಮತ್ತು ರಾಜ್ಯ ಹೆದ್ದಾರಿ ಪ್ರಾಧಿಕಾರ
ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು

Recd. this material on 20/9/18
[VK- Gulbarga]